# ಭಾಗೀರಥಿ ಹೆಗಡೆ ಅವರ ಹೊಳೆಯ ಹಾದಿ ಕಾದಂಬರಿಯ ಪುರುಷ ಪಾತ್ರಗಳ ವಿಶ್ಲೇಷಣೆ

**ಲೋಕಾಂಬಿಕಾ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಥಣಿ, ಬೆಳಗಾವಿ.

**Received: 04/09/2024 ; Acepted: 02/10/2024 ; Published: 05/11/2024**

**DOI: https://doi.org/10.5281/zenodo.14035334**

## ABSTRACT:

ಸುಮಾರು ಎರಡು ಸಾವಿರ ವರ್ಷಗಳಷ್ಟು ಸುದೀರ್ಘವಾದ ಇತಿಹಾಸವನ್ನು ಹೊಂದಿರುವ ಕನ್ನಡ ಸಾಹಿತ್ಯ ಬಹು ಸಮೃದ್ಧವಾಗಿದ್ದು ಅದರಲ್ಲಿ ಆಧುನಿಕ ಕನ್ನಡ ಸಾಹಿತ್ಯ ಘಟ್ಟವು ಒಂದು. ಈ ಕಾಲಘಟ್ಟ ಒಂದು ರೀತಿಯಲ್ಲಿ ವಿಶೇಷ ಮತ್ತು ವಿಶಿಷ್ಟ. ಕಾರಣ ಆಧುನಿಕ ಕನ್ನಡ ಸಾಹಿತ್ಯವನ್ನು ಅಧ್ಯಯನದ ದೃಷ್ಟಿಯಿಂದ ಅದು ಬೆಳೆದು ಬಂದಿರುವ ಆಧಾರದ ಮೇಲೆ ನವೋದಯ, ನವ್ಯ, ಪ್ರಗತಿಶೀಲ, ದಲಿತ-ಬಂಡಾಯ ಮತ್ತು ಮಹಿಳಾ ಸಾಹಿತ್ಯ ಎಂದು ಅನೇಕ ಭಾಗಗಳಾಗಿ ವಿಂಗಡಿಸಿದ್ದೇವೆ. ಕಥೆ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ, ಕಾವ್ಯದಂತಹ ಅನೇಕ ಸಾಹಿತ್ಯ ಪ್ರಕಾರಗಳು ಈ ಕಾಲಘಟ್ಟದಲ್ಲಿ ಬೆಳೆದು ತನ್ನ ಸಾಹಿತ್ಯ ಕ್ಷೇತ್ರವನ್ನು ಹಿಗ್ಗಿಸಿಕೊಂಡಿವೆ. ಆದುದರಿಂದ ಈ ಕಾಲಘಟ್ಟವನ್ನು ಸಾಹಿತ್ಯ ಕ್ಷೇತ್ರದ ಸುಗ್ಗಿಯ ಕಾಲ ಎಂತಲೇ ಕರೆಯಬಹುದು. ಕೇವಲ ಬೆರಳೆಣಿಕೆಯಷ್ಟಿದ್ದ ಮಹಿಳಾ ಲೇಖಕಿಯರು ಹೊಸಗನ್ನಡ ಕಾಲಘಟ್ಟದಲ್ಲಿ ಆಧುನಿಕ ಶಿಕ್ಷಣ ಕಲಿತ ಹೆಣ್ಣು ಮಕ್ಕಳು ಬರವಣಿಗೆಯಲ್ಲಿ ತೊಡಗಿಸಿಕೊಂಡು ಪುರುಷರಷ್ಟೇ ಸಮರ್ಥವಾಗಿ ಮತ್ತು ಸಶಕ್ತವಾಗಿ ಭಿನ್ನ ನೆಲೆಗಳಲ್ಲಿ ಸಾಹಿತ್ಯ ಸೃಷ್ಟಿಸಿ ಇಂದು ಮಹಿಳಾ ಸಾಹಿತ್ಯ ಪರಂಪರೆಯನ್ನು ಸಾಕಷ್ಟು ಹಿರಿದಾಗಿಸಿ ಸೈ ಎನಿಸಿಕೊಂಡಿದ್ದಾರೆ. ಪರಿಣಾಮವಾಗಿ ಆಧುನಿಕ ಕನ್ನಡ ಸಾಹಿತ್ಯದ ಒಂದು ಪಂಥವಾಗಿರುವ ಮಹಿಳಾ ಸಾಹಿತ್ಯ ಕಾಲಘಟ್ಟದಲ್ಲಿ ನಂಜನಗೂಡು ತಿರುಮಲಾಂಬ, ಆರ್. ಕಲ್ಯಾಣಮ್ಮ, ಕೊಡಗಿನ ಗೌರಮ್ಮ, ತ್ರಿವೇಣಿ, ಸಾರಾ ಅಬೂಬಕ್ಕರ್, ಎಚ್. ಎಸ್. ಪಾರ್ವತಿ, ಮಾಲತಿ ಪಟ್ಟಣಶೆಟ್ಟಿ, ಪ್ರೇಮಾಭಟ್, ಎ. ಪಿ. ಮಾಲತಿ, ಭಾಗೀರಥಿ ಹೆಗಡೆ, ವೈದೇಹಿ ಹೀಗೆ ಇನ್ನೂ ಅನೇಕ ಮಹಿಳಾ ಲೇಖಕಿಯರು ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡುವುದರ ಮೂಲಕ ಈ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಮತ್ತಷ್ಟು ವಿಸ್ತಾರಗೊಳಿಸಿದರು. ಇವರುಗಳಲ್ಲಿ ಪ್ರಮುಖವಾಗಿ ಕಂಡುಬರುವ ಭಾಗೀರಥಿ ಹೆಗಡೆ ಅವರು ಕಥೆ, ಕಾದಂಬರಿ, ಕವನ, ಪ್ರಬಂಧ, ನಾಟಕ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರು ಹೊಳೆಯ

ಹಾದಿ ಮತ್ತು ಕಾಲಾಂತರ ಎಂಬ ಎರಡು ಕಾದಂಬರಿಗಳನ್ನು ಬರೆದಿದ್ದಾರೆ. ಪ್ರಸ್ತುತ ಹೊಳೆಯ ಹಾದಿ ಎಂಬ ಅವರ ಕಾದಂಬರಿಯನ್ನು ಆಧಾರವಾಗಿಟ್ಟುಕೊಂಡು ಅಲ್ಲಿ ಬರುವ ಪುರುಷ ಪಾತ್ರಗಳನ್ನು ಕುರಿತು ವಿವೇಚಿಸಲಾಗಿದೆ.

## KEYWORDS:

ಭಾಗೀರಥಿ ಹೆಗಡೆ, ಪುರುಷ ಪಾತ್ರ ಚಿತ್ರಣ, ಸಾಮಾಜಿಕ, ದೌರ್ಬಲ್ಯ, ಜವಾಬ್ದಾರಿ, ದುಶ್ಚಟ, ಕೃಷಿ.

ಸ್ತ್ರೀಪರ ಧೋರಣೆಯುಳ್ಳ ಭಾಗೀರಥಿ ಹೆಗಡೆ ಅವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರಖ್ಯಾತವಾಗಿರುವ ಹಿರಿಯ ಲೇಖಕಿ. ಹೊಳೆಯ ಹಾದಿ ಎಂಬ ಕಾದಂಬರಿಯ ಮೂಲಕ ಕಾದಂಬರಿ ಲೋಕಕ್ಕೆ ಪಾದಾರ್ಪಣೆ ಮಾಡಿದ ಕತೆಗಾರ್ತಿಯಾದ ಭಾಗೀರಥಿಯವರ ದೃಷ್ಟಿಯಲ್ಲಿ "ಸಣ್ಣಕತೆ ಒಂದು ಕೋಲ್ ಮಿಂಚಾದರೆ ಕಾದಂಬರಿ ಹಗಲ ಬೆಚ್ಚಗಿನ ಬಿಸಿಲು, ಕಾದಂಬರಿ ಸಾಗರದ ಅಗಾಧ ಜಲರಾಶಿಯಾದರೆ ಸಣ್ಣಕತೆ ಬೊಗಸೆಯೊಳಗಿನ ನೀರು, ಆದರೂ ಕಾದಂಬರಿಯಲ್ಲಿರುವ ಸಮಗ್ರತೆ ಮತ್ತು ಜೀವನ ದರ್ಶನವನ್ನು ಸಣ್ಣಕತೆಯಲ್ಲಿ ಕಾಣಲು ಅಸಾಧ್ಯ ಅಲ್ಲದೇ ಕಥಾ ಸಂಕಲನಕ್ಕಿಂತ ಕಾದಂಬರಿಯ ಮೌಲ್ಯ ಹೆಚ್ಚು "[1] ಎಂಬುದು ಇವರ ಅಭಿಮತ. ಹೊಳೆಯ ಹಾದಿ ಕಾದಂಬರಿಯಾಗಿ ಪ್ರಕಟಗೊಳ್ಳುವುದಕ್ಕೆ ಮೊದಲು "ಸಕಾಲಿಕ" ಎಂಬ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡು ಯಶಸ್ವಿಗಳಿಸಿತ್ತು. 2008ರಲ್ಲಿ ಪುಸ್ತಕ ರೂಪದಲ್ಲಿ ಹೊರಬಂದ ಈ ಕಾದಂಬರಿ ಸ್ತ್ರೀ ಸಂವೇದನೆಯನ್ನು ಒಳಗೊಂಡ ಸ್ತ್ರೀಕೇಂದ್ರಿತ ಕಾದಂಬರಿಯಾಗಿದ್ದರೂ ಈ ಕಾದಂಬರಿಯಲ್ಲಿನ ಪುರುಷ ಪಾತ್ರಗಳನ್ನು ಕುರಿತು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

ಸ್ತ್ರೀವಾದಿ ಲೇಖಕಿ ಎಂದೇ ಗುರುತಿಸಿಕೊಂಡಿರುವ ಭಾಗೀರಥಿ ಹೆಗಡೆ ಅವರು ತಮ್ಮ ಸುತ್ತಲಿನ ಸಮಾಜದಲ್ಲಿ ಜರುಗುವ ನೈಜ ಘಟನೆಗಳನ್ನೆ ವಸ್ತುವಾಗಿರಿಸಿಕೊಂಡು ಬರವಣಿಗೆಯಲ್ಲಿ ತೊಡಗಿಸಿಕೊಂಡವರು. ಇವರ ಹೊಳೆಯ ಹಾದಿ ಕಾದಂಬರಿಯು ಪುರುಷ ಪ್ರಧಾನ ಸಮಾಜದ ಛಾಯೆಯಾಗಿ ಮೂಡಿಬಂದಿದೆ. ಈ ಕಾದಂಬರಿಯಲ್ಲಿ ಪ್ರಮುಖವಾಗಿ ಬರುವ ಪುರುಷ ಪಾತ್ರಗಳು ಪರಂಭಾವ, ಗುರು, ಮರಾಠಿ ದಾಮಜ್ಜ.

ಪರಂಭಾವ ಈ ಕಾದಂಬರಿಯ ನಾಯಕನ ತಂದೆ. ಈ ಕಾದಂಬರಿಯಲ್ಲಿ ಪರಂಭಾವನ ಪಾತ್ರ ಸಣ್ಣ ಪ್ರಮಾಣದಲ್ಲಿದ್ದರೂ ಕಾದಂಬರಿಯಲ್ಲಿ ಬಹುಮುಖ್ಯವಾದ ಪಾತ್ರವಾಗಿದೆ. ಅರವತ್ತೈದು ವರ್ಷದ ಪರಂಭಾವನೇ ಮನೆಗೆ ಹಿರಿಯವನಾಗಿ ಇಡೀ ಕುಟುಂಬದ ಜವಾಬ್ದಾರಿ ನಿಭಾಯಿಸುತ್ತಿದ್ದನು. ಹೆಚ್ಚಾಗಿ ತಾನೇ ಕುಟುಂಬದ ಎಲ್ಲಾ ವಿಚಾರಗಳಲ್ಲೂ ನಿರ್ಧಾರ ತೆಗೆದುಕೊಳ್ಳುವ ಪರಂಭಾವ ಒಮ್ಮೊಮ್ಮೆ ತನ್ನ

ಹೆಂಡತಿಯೊಂದಿಗೆ ಚರ್ಚಿಸುವುದರ ಮೂಲಕ ಅವಳ ಅಭಿವ್ಯಕ್ತಿಗೂ ಅವಕಾಶ ನೀಡಿದ್ದನು. ಪರಂಭಾವನಿಗೆ ಎರಡು ಹೆಣ್ಣು ಮತ್ತು ಮೂವರು ಗಂಡು ಮಕ್ಕಳು. ಒಬ್ಬ ತಂದೆಯಾಗಿ ಮಕ್ಕಳಿಗೆ ತಾನೇ ಮುಂದೆ ನಿಂತು ಮದುವೆ ಮಾಡಿ ಅವರನ್ನು ಒಂದು ದಡ ಮುಟ್ಟಿಸಿ ತನ್ನ ಜವಾಬ್ದಾರಿಯನ್ನು ಪೂರ್ಣಗೊಳಿಸಿದ್ದನು. ಹೀಗಿರುವಾಗ ಪರಂಭಾವ ತನ್ನ ನೆಚ್ಚಿನ ಹಿರಿಯ ಮಗ ಗುರು ಮತ್ತು ಆತನ ಕುಟುಂಬವನ್ನು ತಾನು ಹೊಸದಾಗಿ ಖರೀದಿಸಿದ್ದ ನಾಲ್ಕೆಕರೆ ಗದ್ದೆ, ಅರ್ಧ ಎಕರೆ ಹಿತ್ತಿಲು ಇರುವ ನಾಗರಕಟ್ಟೆಗೆ ಕಳುಹಿಸಿ ತನ್ನ ಕುಟುಂಬದಿಂದ ಬೇರ್ಪಡಿಸುವುದರ ಮೂಲಕ ತನ್ನ ದುಃಖಕ್ಕೆ ತಾನೇ ಕಾರಣನಾಗುತ್ತಾನೆ. ಹಿರಿಮಗ ಮನೆ ಬಿಟ್ಟು ಹೋದ ನಂತರ ಪರಂಭಾವನ ಮನೆ ದೊಡ್ಡ ಕುರುಕ್ಷೇತ್ರವಾಗುತ್ತದೆ. ಪ್ರತಿದಿನ ಅಪ್ಪ ಮತ್ತು ಕಿರಿ ಮಗನಿಗೂ ಜಗಳ, ಕೊನೆಗೊಂದು ದಿನ ಮಗ ಅಪ್ಪನ ಮೇಲೆ ಕೈ ಮಾಡಲು ಹೋದಾಗ ತಾಯಿಯೇ ಅಡ್ಡ ನಿಂತು ತಡೆದಿದ್ದಳು. “ಆಹಾ ಗಂಡಸೇ! ನಿನ್ನ ದುಷ್ಟತನದಿಂದಾಗಿ ನನ್ನ ಇಡೀ ಆಯುಷ್ಯವನ್ನೇ ನರಕ ಮಾಡಿಬಿಟ್ಟೆ. ನಿನಗೆ ಹೇಳುವವರು ಯಾರೂ ಇಲ್ಲವೆಂದು ಮೆರೆದೆ, ಹೆಂಗಾತು ಈಗ? ನಿನ್ನಿಂದ ಹುಟ್ಟಿದ ಮಗನೇ ನಿನಗೆ ತಿರುಗಿ ಬಿದ್ದನೊ”[2] ಎಂಬ ಮಾತು ಪರಂಭಾವನ ಹೆಂಡತಿಯ ಸ್ವಗತದಲ್ಲಿ ಗಂಡನ ಬಗೆಗಿನ ಅವಳ ಅಸಮಾಧಾನವನ್ನು ಕಾಣಬಹುದು. ಇತ್ತ ಸಂಪೂರ್ಣವಾಗಿ ದುಶ್ಚಟಗಳಿಗೆ ಒಳಗಾಗಿ ಬದಲಾಗಿದ್ದ ಗುರು ಕೂಡ ತಂದೆಯ ಮಾತನ್ನು ನಿರ್ಲಕ್ಷಿಸುವಂತಾಗಿದ್ದನು. ಪರಂಭಾವ ತನ್ನ ಮನೆಯಲ್ಲಿ ತಾನೇ ಮಗನ ಮುಂದೆ ಅಪರಿಚಿತನ ರೀತಿಯಲ್ಲಿ ಇರಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಮಕ್ಕಳಿದ್ದು ಇಲ್ಲದ ಅನಾಥಪ್ರಜ್ಞೆಯನ್ನು ಪರಂಭಾವ ತನ್ನ ಕೊನೆಗಾಲದಲ್ಲಿ ಅನುಭವಿಸಬೇಕಾಯಿತು. ಎಂಥಾ ಹುಲಿಯೂ ಒಂದಿನ ಇಲಿಯಾಗಿ ಬಿಡುತ್ತೆ ಎಂಬುವುದಕ್ಕೆ ಪರಂಭಾವ ಜೀವಂತ ಸಾಕ್ಷಿಯಾಗಿದ್ದನು.

ಹೊಳೆಯ ಹಾದಿ ಕಾದಂಬರಿಯಲ್ಲಿ ಬರುವ ಮತ್ತೊಂದು ಪ್ರಮುಖ ಪಾತ್ರ ಎಂದರೆ ಮರಾಠಿ ದಾಮಜ್ಜ. ಕಾದಂಬರಿಯ ನಡುವಲ್ಲಿ ಕಾಣಿಸಿಕೊಳ್ಳುವ ಈತನ ಪಾತ್ರ ಪೋಷಕ ಪಾತ್ರದಂತೆ ಮೂಡಿಬಂದಿದೆ. ಈತ ಕಾದಂಬರಿಯ ನಾಯಕನಿಗೆ ಮಾರ್ಗದರ್ಶಕನೂ ಮತ್ತು ಹಿತೈಷಿಯೂ ಆಗಿದ್ದ. ನಾಗರಕಟ್ಟೆಯಲ್ಲಿ ವಾಸವಿರುವ ದಾಮಜ್ಜ, ಆಗ ತಾನೇ ಹೊಸದಾಗಿ ಅಲ್ಲಿಗೆ ಬಂದ ಗುರು ಮತ್ತು ಅವನ ಕುಟುಂಬಕ್ಕೆ ಮರಾಠಿ ದಾಮಜ್ಜನೇ ಮಾರ್ಗದರ್ಶಿ. ಈ ಜಗತ್ತಿನಲ್ಲಿ ಒಬ್ಬರನ್ನೊಬ್ಬರು ನಂಬದಿದ್ದ ಕಾಲದಲ್ಲಿ “ಗದ್ದೆ ಹೂಡಲು ಬೇಕಾದ್ರೆ ತಮ್ಮದೇ ಗಳ ಇದೆ-ಎತ್ತುಗಳಿವೆ, ಬಾಡಿಗೆಗೆ ಕೊಡುತ್ತೇವೆ, ಒಂದೆರಡು ಗಾಡಿ ಗೊಬ್ಬರವೂ ಇದೆ ಬೇಕಾದ್ರೆ, ಇನ್ನು ತೀರಾ ಹರಕತ್ತಾದ್ರೆ ಹತ್ತು ಇಪ್ಪತ್ತು ಕೈಗಡ ಬೇಕಾದ್ರೂ ಕೊಡೋಣ. ದಾಕ್ಷಿಣ್ಯ ಮಾಡ್ಕೊಬೇಡಿ, ನಾನಿಲ್ಲಿರ್ತಾ ನಿಮಗ್ಯಾವ ತೊಂದರೇನೂ ಆಗೋದಿಲ್ಲ, ಹೆದರಬೇಡಿ....”[3] ಎಂದು ದಾಮಜ್ಜ ಗುರುಗೆ ಧೈರ್ಯ ಹೇಳಿದ್ದನು. ದಾಮಜ್ಜನ ಸಲಹೆಯಂತೆ ಗುರು ಯಶಸ್ವಿಯಾಗಿ ಕೃಷಿ

ಮಾಡಿ ಒಳ್ಳೆಯ ಬೆಳೆ ತೆಗೆದು ದಾಮಜ್ಜನನ್ನು ಕರೆದು ಹೊಸಕ್ಕಿ ಅಡುಗೆ ಮಾಡಿ ಬಡಿಸಿದರು. ಗುರು ತನ್ನ ದುಶ್ಚಟದ ಕಾರಣ ಮನೆಗೆ ದಿನಸಿ ತರುವುದನ್ನೆ ನಿಲ್ಲಿಸಿದ್ದ ಸಂದರ್ಭದಲ್ಲಿ ಗುರುನ ಕುಟುಂಬ ಹಸಿವಿನಿಂದ ಕಂಗಾಲಾದಾಗ ದಾಮಜ್ಜನೇ ಅವರ ಪರಿಸ್ಥಿತಿಯನ್ನು ಅರಿತು ದಿನಸಿ ನೀಡುವುದರ ಮೂಲಕ ಸಹಾಯ ಮಾಡುವುದರ ಮೂಲಕ ಮಾನವೀಯತೆ ಮರೆದಿದ್ದನು. ಈ ಕಾದಂಬರಿಯಲ್ಲಿ ಬಂದಿರುವ ದಾಮಜ್ಜನ ಪಾತ್ರ ಸಮಾಜಕ್ಕೆ ಮಾದರಿಯಾಗಿ ಮೂಡಿಬಂದಿದೆ ಎಂದರೆ ತಪ್ಪಾಗಲಾರದು.

ಹೊಳೆಯ ಹಾದಿ ಕಾದಂಬರಿಯ ಬಹುಮುಖ್ಯವಾದ ಪಾತ್ರ ಗುರು. ಗುರು ಈ ಕಾದಂಬರಿಯ ನಾಯಕ ಎಂದರೆ ತಪ್ಪಾಗಲಾರದು. ಈ ಕಾದಂಬರಿಯ ಆರಂಭದಿಂದ ಕೊನೆಯವರೆಗೂ ಮೂಡಿಬಂದಿರುವ ಈ ಪಾತ್ರದ ಮೂಲಕ ಸಮಾಜದ ಪುರುಷರ ಮನಸ್ಥಿತಿಯನ್ನು ಹೇಳುವ ಪ್ರಯತ್ನವನ್ನು ಲೇಖಕಿ ಮಾಡಿದ್ದಾರೆ. ಈ ಪಾತ್ರದ ಮುಖೇನ ಪ್ರಸಕ್ತ ಸಾಮಾಜಿಕ ಜೀವನ ಮತ್ತು ಸಮಸ್ಯೆಗಳನ್ನು ನಮ್ಮ ಕಣ್ಣ ಮುಂದೆ ಬಿಚ್ಚಿಡುತ್ತದೆ. ಮನೆಗೆ ಹಿರಿಯ ಮಗನಾಗಿದ್ದ ಈತನಿಗೆ ಇಬ್ಬರು ತಂಗಿಯರು ಮತ್ತು ಇಬ್ಬರು ತಮ್ಮಂದಿರು. ಗುರು ಸಂಕೋಚ ಮತ್ತು ನಾಚಿಕೆ ಸ್ವಭಾವದವನಾಗಿದ್ದು ಪಿತೃವಾಕ್ಯ ಪರಿಪಾಲಕನಾಗಿದ್ದನು. ಅದರಂತೆ ತನ್ನ ತಂದೆ ನೋಡಿ ಒಪ್ಪಿದ ಸುಕನ್ಯೆಯೊಂದಿಗೆ ವೈವಾಹಿಕ ಜೀವನಕ್ಕೆ ಕಾಲಿಟ್ಟ ಗುರು ಗಂಡನ ಮನೆಯ ಪರಿಸರಕ್ಕೆ ಒಗ್ಗಿಕೊಳ್ಳಲು ಕಷ್ಟಪಡುವ ಹೆಂಡತಿಗೆ "ನೀ ತಾಳಿಕೋಬೇಕು, ಹೆಂಗ್ಸಾಗಿ ಹುಟ್ಟಿದವ್ರು ಯಾರಿದ್ದೊ ಮನೆಗೋಗಿ ಅವರೆಲ್ಲರ ಮಧ್ಯೆ ತನ್ನ ಬೇಳೆ ಬೇಯಿಸ್ಕೊಂಡು ಹೋಗೋದಂದ್ರೆ ಸಸಾರವಲ್ಲ, ಅಬ್ಬೆ ಹ್ಯಾಂಗದ್ಲೊ ಹಾಂಗೇ ಮಾಡು. ಅಪ್ಪ ಏನಂದನೊ ಹಾಂಗೆ ನಡಕೋ. ಅವರೆಲ್ಲರ ಜೊತೆ ಹೊಂದಿಕೊಳ್ಳೋದ ಕಲ್ತುಕೋ"[4] ಎಂದು ಗುರು ತನ್ನ ಹೆಂಡತಿ ಹೊಸ ಕುಟುಂಬಕ್ಕೆ ಹೊಂದಿಕೊಳ್ಳುವಂತೆ ತಿಳಿವಳಿಕೆ ಮತ್ತು ಸಾಂತ್ವನ ಹೇಳುತ್ತಾನೆ. ಕ್ರಮೇಣ ತನ್ನ ಮನೆಯವರು ತನ್ನ ಹೆಂಡತಿಯೊಂದಿಗೆ ನಡೆದುಕೊಳ್ಳುವ ರೀತಿಯನ್ನು ಗಮನಿಸಿ "ಅಬ್ಬೆ ಅಪ್ಪ ಆಗ್ಲಿ-ತಮ್ಮ ತಂಗಿರಾಗ್ಲಿ ಹಿಂಗ್ ಮಾಡಬಾರ್ದಿತ್ತು. ಆದ್ರೆ ಅವ್ರಿಗೆ ಹೇಳೋರ್ಯಾರು? ನಾನೊಮ್ಮೆ ಒಂದ್ ಮಾತು ಹೇಳಿದ್ರೆ ಸಾಕು, ಇಷ್ಟು ವರ್ಷ ಸಾಕಿ ಸಲಹಿದ ತಮಗಿಂತ ನಿನ್ನೆ ಬಂದ ಹೆಂಡ್ತಿನೇ ಹೆಚ್ಚಾಗಿ ಬಿಟ್ಲು ಅಂತಾರೆ. ಇನ್ನು ಇಲ್ಲಿರಲಿಕ್ಕೆ ನಿನ್ನಿಂದ ಸಾಧ್ಯನೇ ಇಲ್ಲಾಂದ್ರೆ ನಡಿ, ಎಲ್ಲಾದ್ರೂ ದೇಶಾಂತ್ರ ಹೋಗಿ ಬಿಡೋಣ"[5] ಅಲ್ಲದೇ ತಾನು ಸದಾ ನಿನ್ನ ಕಷ್ಟ ಮತ್ತು ಸುಖದಲ್ಲಿ ಜೊತೆಗೆ ಇರುತ್ತೇನೆ ಎಂದು ಗುರು ಅವಳಿಗೆ ತನ್ನ ಅಸಹಾಯಕತೆಯನ್ನು ಮನವರಿಕೆ ಮಾಡಿ ಧೈರ್ಯ ಹೇಳುತ್ತಿದ್ದನು. ಯಾವತ್ತೂ ಹಿರಿಯರ ಮಾತನ್ನು ಮೀರದ ಮತ್ತು ಹೇಳಿದ್ದನ್ನು ಹೇಳಿದಂತೆ ಮಾಡುವ ಗುರು ತಂದೆಯ ತೀರ್ಮಾನದಂತೆ ಅವರ ಮಾತಿಗೆ

ಎದುರಾಡದೇ ತನಗೆ ಇಷ್ಟವಿಲ್ಲದಿದ್ದರೂ ತನ್ನ ಕುಟುಂಬ ಸಮೇತ ಗೊತ್ತುಗುರಿ ಇಲ್ಲದ, ಜನ ಸಂಪರ್ಕದಿಂದ ದೂರವಿರುವ ನಾಗರಕಟ್ಟೆಗೆ ಹೋಗಿ ನೆಲೆಸುತ್ತಾನೆ. ಆರಂಭದಲ್ಲಿ ಆ ಹೊಸ ಸ್ಥಳಕ್ಕೆ ಹೊಂದಿಕೊಳ್ಳಲು ಕಷ್ಟವಾದರೂ ಅನಿವಾರ್ಯವಾಗಿ ಜೀವನ ನಡೆಸಲು ಪ್ರಾರಂಭಿಸಿದನು. ಸದಾ ತನ್ನ ತಂದೆ ತಾಯಿಯ ಆಜ್ಞೆಯ ಪರಿಪಾಲನೆ ಮಾಡುತ್ತಿದ್ದ ಗುರು "ಅಪ್ಪನ ಬಾಯಿಂದ ಹೊರಬೀಳುವ ಮಾತಿಗಾಗಿಯೇ ಕಾದುಕೊಂಡು ಅವರು ಹೇಳಿದಂತೆ ಹೂಬೇಹೂಬು ಮಾಡಿ ಮುಗಿಸುತ್ತಿದ್ದವನಿಗೆ ಇಲ್ಲಿ ಸಿಕ್ಕಿದ ಸ್ವಾತಂತ್ರ್ಯ ಒಂದು ಬಂಧನವಾಗಿ ಕಂಡಿತು."[6] ನಾಗರಕಟ್ಟೆಗೆ ಹೊರಡುವ ಹಿಂದಿನ ರಾತ್ರಿ ಮನೆಯವರಿಗೆ ತಿಳಿಯದ ಹಾಗೆ ಗುರುವಿನ ಕೈಯಲ್ಲಿ ಒಂದು ಸಾವಿರ ಕೊಟ್ಟು ಆ ಹಣವನ್ನು ಗದ್ದೆ ಹೂಡಿಸಲು ಮತ್ತು ದೈನಂದಿನ ಖರ್ಚಿಗಾಗಿ ಬಳಸಿಕೊಳ್ಳಲು ತಂದೆ ಸೂಚಿಸಿರುತ್ತಾನೆ.

"ಯಾವುದೇ ಸಮಾಜದಲ್ಲಿಯೇ ಆಗಲಿ ಅಲ್ಲಿನ ಆಗುಹೋಗುಗಳ ಬಗ್ಗೆ ಸೂಕ್ಷ್ಮ ಸಂವೇದನಾಶೀಲನಾದ ವ್ಯಕ್ತಿ ಉಳಿದವರಿಗಿಂತ ಹೆಚ್ಚು ಸೂಕ್ಷ್ಮವಾಗಿ , ಹೆಚ್ಚು ತೀವ್ರವಾಗಿ ಸ್ಪಂದಿಸುತ್ತಾನೆ."[7] ಅಂತೆಯೇ ತೋಟದಲ್ಲಿ ಕಳೆ ಕೀಳುವುದು, ಅಡಿಕೆ ಸುಲಿಯುವುದು, ಯಾಲಕ್ಕಿ ಕೊಯ್ಯುವುದು ಬಿಟ್ಟರೆ ರೈತಾಪಿ ಕೆಲಸ ಗೊತ್ತಿಲ್ಲದ ಗುರು ನಾಗರಕಟ್ಟೆಯಲ್ಲಿ ಇವರ ಮನೆಯಿಂದ ಮೈಲು ದೂರದಲ್ಲಿರುವ ಮರಾಠಿ ದಾಮಜ್ಜನ ಮಾರ್ಗದರ್ಶನದಂತೆ ತನ್ನಿಂದ ಸಾಧ್ಯವಿಲ್ಲ ಅಂದುಕೊಂಡಿದ್ದ ಭತ್ತದ ಗದ್ದೆ ಕೆಲಸವನ್ನು ಸುಸೂತ್ರವಾಗಿ ಮಾಡಿ ಯಶಸ್ವಿಯಾಗುತ್ತಾನೆ. ತಂದೆ ಖರ್ಚಿಗಾಗಿ ಕೊಟ್ಟಿದ್ದ ದುಡ್ಡೆಲ್ಲಾ ಖರ್ಚಾದಾಗ ಗುರು ತಂದೆಯ ಬಳಿ ಹೋಗಿ ಹಣ ಕೇಳಿದಾಗ ಅದಕ್ಕಾಗಿ ತಂದೆ "ನೀ ಯಾವತ್ತೂ ದುಡ್ಡಿನ ಗುರುಸಾಗಿ ಈ ಮನೆ ಮೆಟ್ಲು ಹತ್ತಬೇಡ... ಇನ್ನೇನಿದ್ರೂ ನೀನುಂಟು-ನಿನ್ನ ಹೆಂಡ್ತಿ ಮಕ್ಕಳುಂಟು, ನಿನ್ನ ಹಣೆಬರಾ ಉಂಟು"[8] ಎಂದು ಅವರಿಂದ ತಿರಸ್ಕಾರಕ್ಕೊಳಗಾದಾಗ ತುಂಬಾ ಕಂಗಾಲಾದ ಗುರು ಎಲ್ಲಾ ಇದ್ದು ಏನೂ ಇಲ್ಲದವರಂತೆ ಗುರು ಹಣಕ್ಕಾಗಿ ದಾಮಜ್ಜನ ಮನೆಯ ಗಂಡಸರು ಮತ್ತು ಹೆಂಗಸರೆಲ್ಲಾ ಹೋಗುವ ರಸ್ತೆ ಕೆಲಸಕ್ಕೆ ಮಣ್ಣು ಹೊರುವ ಕೂಲಿ ಕೆಲಸಕ್ಕೆ ಹೋಗಲು ಪ್ರಾರಂಭಿಸುತ್ತಾನೆ.

ಅಷ್ಟರಲ್ಲಿ ಇತ್ತ ಭತ್ತದ ತೆನೆಗಳು ಕೊಯ್ಲುಗೆ ಬರುತ್ತದೆ. ಗದ್ದೆಯಿಂದ ಬಂದ ಐವತ್ತು ಚೀಲ ಭತ್ತದಲ್ಲಿ ಮೊದಲು ಕೈಸಾಲವನ್ನು ತೀರಿಸಿದನು. ನಂತರ ಮನೆ ಮಂದಿಯೆಲ್ಲಾ ಹೊಸಬಟ್ಟೆ ಧರಿಸಿ ದಾಮಜ್ಜನನ್ನೂ ಕರೆದು ಹೊಸಕ್ಕಿ ಪಾಯಸ ಮಾಡಿ ಊಟ ಮಾಡಿದರು. ಈ ದಿನ ನಿಜಕ್ಕೂ ಗುರು ಬದುಕಿನಲ್ಲಿ ದೊಡ್ಡ ಹಬ್ಬವೇ ಆಗಿತ್ತು. ಈ ಸಂದರ್ಭದಲ್ಲಿ ಗುರು ತನ್ನ ಸಂತೋಷದೊಂದಿಗೆ ಪಾಲ್ಗೊಳ್ಳುವಂತೆ ಎಂಟು ದಿನದ ಹಿಂದೆಯೇ ತಂದೆ ಮನೆಗೆ ಪತ್ರ ಬರೆದಿದ್ದನು. ತಂದೆಯ ಆಜ್ಞೆಯಿಲ್ಲದೇ ತಾನೊಬ್ಬನೇ ಐವತ್ತು ಚೀಲ ಭತ್ತ ಬೆಳೆದಿದ್ದೇನೆ ಎಂದು ತನ್ನ ತಂದೆಗೆ ತೋರಿಸಿ

ಮೀಸೆ ತಿರುಪುವ ಹಂಬಲವನ್ನಿಟ್ಟುಕೊಂಡಿದ್ದನು. ಆದರೆ ತನ್ನ ಕುಟುಂಬದಿಂದ ಯಾರೊಬ್ಬರೂ ಬಾರದಿರುವುದನ್ನು ಕಂಡು ದುಃಖಿತನಾದರೂ ಗುರು ಅಂದು ತನ್ನ ಕುಟುಂಬದೊಂದಿಗೆ ಹೊಸಕ್ಕಿ ಉಂಡು ಸಂಭ್ರಮಪಟ್ಟನು. ಆದರೂ ಗುರು ತಾನು ಕೂಲಿ ಕೆಲಸಕ್ಕೆ ಹೋಗುವುದನ್ನು ಮಾತ್ರ ನಿಲ್ಲಿಸಲಿಲ್ಲ.

ನಾಗರಕಟ್ಟೆಯಲ್ಲಿ ನೆಲೆನಿಂತ ಗುರು ತನ್ನ ಕುಟುಂಬದೊಂದಿಗೆ ಜೀವನ ನಿರ್ವಹಿಸುತ್ತಾ ವರ್ಷಗಳೇ ಉರುಳಿದವು. ಕಾಲ ಕಳೆದಂತೆ ಗುರು ಸಹವಾಸ ದೋಷದಿಂದ ಕುಡಿತ ಮತ್ತು ಜೂಜಿನ ದುಶ್ಚಟಗಳಿಗೆ ಬಲಿಯಾಗಿ ದುಡಿದ ದುಡ್ಡನ್ನೆಲ್ಲಾ ತನ್ನ ದುಶ್ಚಟಗಳಿಗೆ ಖರ್ಚು ಮಾಡುತ್ತಿದ್ದ ಕಾರಣ ಇತ್ತ ಮನೆಯಲ್ಲಿ ಹೊತ್ತಿನ ಊಟಕ್ಕೂ ತೊಂದರೆ ಉಂಟಾಗುತ್ತದೆ. ಹೆಂಡತಿಯನ್ನು ಹೆಚ್ಚಾಗಿಯೇ ಪ್ರೀತಿಸುತ್ತಿದ್ದ ಗುರು ಒಂದು ಕಾಲದಲ್ಲಿ ತನ್ನ ಹೆಂಡತಿಯ ದುಃಖಗಳಿಗೆ ಸ್ಪಂದಿಸಿ ನೀನು ಮತ್ತು ಮಕ್ಕಳಿಲ್ಲದೇ ನಾನು ಬದುಕಿರಲಾರೆ ಎಂದು ಹೆಂಡತಿಯನ್ನು ಎದೆಗೊತ್ತಿಕೊಂಡು ಸಂತೈಸುತ್ತಿದ್ದ ಗುರು ಈಗೀಗ ತನ್ನ ಹೆಂಡತಿ ಮತ್ತು ಮಕ್ಕಳನ್ನು ಕಂಡರೆ ಅಸಡ್ಡೆ ಮಾಡುತ್ತಿದ್ದನು. ಗುರು ಗಂಡನಾಗಿ ಮತ್ತು ತಂದೆಯಾಗಿ ತನ್ನ ಜವಾಬ್ದಾರಿಯನ್ನು ಮರೆತು ಅವರೊಂದಿಗೆ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದನು. ಒಮ್ಮೆ ಕುಡಿದು ತಡರಾತ್ರಿ ಮನೆಗೆ ಬಂದ ಗಂಡನನ್ನು ಪ್ರಶ್ನಿಸಿದ ಸುಕನ್ಯೆಗೆ "ನಾ ಬೇಕಾದಷ್ಟು ಹೊತ್ತಿಗೆ ಬರುತ್ತೇನೆ, ನಾ ಗಂಡ್ಸು, ನಾ ದುಡದು ನಿಮ್ಮ ಹೊಟ್ಟೆಗೆ ಹಾಕುವವನು, ನಾ ಬೇಕಾದ್ದು ಮಾಡ್ತೇನೆ, ಬಿಡ್ತೇನೆ. ಅದನ್ನೆಲ್ಲಾ ಕೇಳ್ಳಿಕ್ಕೆ ನೀ ಯಾರೆ"[9] ಎಂದು ಸಿಟ್ಟಿನಿಂದ ಗುರು ಅವಳ ಕೆನ್ನೆಗೆ ಬಾರಿಸುತ್ತಾನೆ. ಸುಕನ್ಯೆ ಎಷ್ಟೇ ಅತ್ತು ಕರೆದು ಗೋಗರೆದು-ಬೈದು ಜಗಳ ಮಾಡಿದರೂ ಗುರು ತನ್ನ ಕುಡಿತ ಮತ್ತು ಜೂಜಿನ ಚಾಳಿಯನ್ನೇನು ಬಿಡಲಿಲ್ಲ. ಆದರೆ ಎಷ್ಟೋ ಬಾರಿ ಗುರು ತಾನು ತನ್ನ ದೌರ್ಬಲ್ಯ ಗೊತ್ತಾಗಿ ಬಿಡುತ್ತದೆ ಎಂಬ ಭೀತಿಯಿಂದ ತನ್ನ ಕುಟುಂಬದವರೊಂದಿಗೆ ನಡೆದುಕೊಳ್ಳುವ ನಡವಳಿಕೆಗೆ ತಾನೇ ನೊಂದುಕೊಳ್ಳುತ್ತಾ ಪಶ್ಚಾತ್ತಾಪದಿಂದ ದುಃಖಿಸುತ್ತಿದ್ದನು.

ವ್ಯಕ್ತಿ ಸಮಾಜದಿಂದಲೇ ಬೆಳೆಯುವುದು, ಈ ಬೆಳವಣಿಗೆಯೇ ಸಾಮಾಜಿಕ ಬೆಳವಣಿಗೆಯಾಗುತ್ತದೆ. ಹೀಗಾಗಿ ವ್ಯಕ್ತಿ ಮತ್ತು ಸಮಾಜದ ನಡುವೆ ಅವಿನಾಭಾವ ಸಂಬಂಧ ಏರ್ಪಡುತ್ತದೆ. ಆದರೆ ಈ ಕಾದಂಬರಿಯಲ್ಲಿ ಸಮಾಜದ ಕೆಲ ದುಷ್ಟವ್ಯಕ್ತಿಗಳಿಂದ ಗುರು ದುಶ್ಚಟಕ್ಕೆ ಬಲಿಯಾಗಿ ಅದರಿಂದ ಹೊರಬರಲಾರದೇ ತೊಳಲಾಡುವ ಅತಂತ್ರ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಅಲ್ಲದೇ ಒಮ್ಮೊಮ್ಮೆ ತನ್ನ ಹೆಂಡತಿಯ ಕೈ ಹಿಡಿದು "ಇನ್ನೆಂದಿಗೂ ಇಂಥಾ ಕೆಲ್ಸ ಮಾಡೋದಿಲ್ವೆ... ಈ ಮಕ್ಳ ಆಣೆಯಾಗಿಯೂ ಇನ್ನ್ಯಾವತ್ತೂ ಕುಡಿಯೋದು ಇಲ್ಲ, ನಿನಗೆ ಹೊಡೆಯೋದೂ ಇಲ್ಲ, ನಂದು ಭಾರೀ ತಪ್ಪಾಗಿ ಹೋಯ್ತು.... ಆ ಸುಟ್ಟ ದೋಸ್ತರಿದ್ದಾರಲ್ಲ, ಅವ್ರಿಂದಲೇ ಇಷ್ಟಾಗಿದ್ದು, ಕುಡೀದಿದ್ರೆ ಮಣ್ಣ ಕೆಲ್ಸ ಮಾಡೋಕೆ ಆಗೋದಿಲ್ಲ ಅಂದ್ರು, ಕುಡಿದ್ರೆ ಮೈ

ಕೈ ನೋವೆಲ್ಲ ಮಾಯ ಆಗುತ್ತೆ ಅಂದ್ರು... ಬ್ಯಾಡ ಬ್ಯಾಡ್ ಅಂದ್ರು ಹೊಯ್ಕಂಡ್ರೂ ಕೇಳದೆ ಒತ್ತಾಯ ಮಾಡಿ ಕುಡಿಸಿ ರೂಢಿ ಮಾಡಿಸಿಬಿಟ್ರು..."[10] ಇನ್ನು ಆ ದೋಸ್ತರತ್ತ ಕಣ್ಣೆತ್ತಿ ನೋಡೋದೇ ಇಲ್ಲ ಎಂದು ಬೇಡಿಕೊಳ್ಳುತ್ತಿದ್ದನು. ಆದರೂ ಗುರು ತಾನು ಪ್ರಯತ್ನಪಟ್ಟರೂ ದುಶ್ಚಟಗಳಿಂದ ದೂರವಾಗಲು ಸಾಧ್ಯವಾಗಲಿಲ್ಲ. ಹೆಂಡತಿಯೊಂದಿಗೆ ನೀನಿಲ್ಲದೇ ಮಕ್ಕಳಿಲ್ಲದೇ ನಾ ಮಾತ್ರ ಬದುಕಿರ್ತೇನಾ? ನಿನಗೆ ಬ್ಯಾಡಂದ್ರೆ ನನಗೂ ಬ್ಯಾಡ ಈ ಜೀವ ಎನ್ನುತ್ತ ಹೆಂಡತಿಯ ಕಣ್ಣೊರೆಸುತ್ತಿದ್ದ ಗುರು ಹೆಚ್ಚು ಹೆಚ್ಚು ವ್ಯಸನಿಯಾದನು. ಇದರಿಂದಾಗಿ ಹೆಂಡತಿ ಮತ್ತು ಮಕ್ಕಳು ಸುಖ ಕೊಡಲು ಬಂದವರಲ್ಲ, ಇವರೆಲ್ಲರೂ ಒಂದು ಪಾಶದಂತೆ, ತಾನು ಹೇಗಾದರೂ ಮಾಡಿ ಇದರಿಂದ ಪಾರಾಗಲೇಬೇಕು, ಇವರನ್ನೆಲ್ಲ ಬಿಟ್ಟು ಎಲ್ಲಿಯಾದ್ರೂ ದೂರ ಹೋಗಿ ಬಿಡಬೇಕು ಎಂದು ಸ್ವಾರ್ಥಿಯಾಗಿ ಯೋಚಿಸುವಷ್ಟು ಗುರು ಬದಲಾಗುತ್ತಾನೆ.

21ನೇ ಶತಮಾನದಲ್ಲಿದ್ದರೂ ಗಂಡು ಮಗುವಿನ ಮೋಹ ತಂದೆ ತಾಯಿಯಲ್ಲಿಯರಲ್ಲಿ ಎಷ್ಟು ಜೀವನೋತ್ಸಾಹ ತುಂಬುತ್ತದೆ ಎಂಬುವುದಕ್ಕೆ ಸಾಕ್ಷಿಯಾಗಿ ಗುರು ಮತ್ತು ಸುಕನ್ಯೆ ಪಾತ್ರ ಮೂಡಿಬಂದಿದೆ. ಜಲಜಾಕ್ಷಿ, ವನಜ, ವಾರಿಜ ಎಂಬ ಮೂರು ಹೆಣ್ಣು ಮಕ್ಕಳಿರುವ ಸುಕನ್ಯೆ ನಾಲ್ಕನೇ ಬಾರಿ ಗರ್ಭಿಣಿಯಾದಾಗ ಅವಳನ್ನು ಗುರು ಕುಶಾಲು ಮಾಡಿ "ನೀ ಏನ್ ಚಿಂತೆ ಮಾಡ್ಬೇಡ, ದೇವ್ರಿದ್ದಾನೆ. ಈ ಸಲ ಆದ್ರೂ ಗಂಡಾಗಬಹುದು, ಏನೇ ಆದ್ರೂ ನಾನೋಡ್ಕೋರ್ತೇನೆ ಹೆದ್ರಬೇಡ"[11] ಎಂದು ಧೈರ್ಯ ಹೇಳಿ ಅವಳನ್ನು ಗೆಲುವಾಗಿಸಿದ್ದನು. ಸುಕನ್ಯೆ ಬಾಣಂತನಕ್ಕಾಗಿ ಮನಸಿಲ್ಲದ ಮನಸಿನಿಂದ ಮೊದಲ ಇಬ್ಬರು ಹೆಣ್ಣು ಮಕ್ಕಳನ್ನು ಗುರುವಿನ ಜವಾಬ್ದಾರಿಗೆ ಬಿಟ್ಟು ಮೂರನೆಯ ಮಗಳು ವಾರಿಜಳೊಂದಿಗೆ ತವರು ಮನೆಗೆ ಹೋಗಿ ಮುದ್ದಾದ ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಮಗು ಹುಟ್ಟಿದ ಹತ್ತನೇ ದಿನ ಗುರು ಮಗನಿಗೆ ಶ್ರೀಗಣೇಶ ಎಂದು ಹೆಸರಿಟ್ಟನು. ಸ್ವರ್ಗಕ್ಕೆ ಮೂರೇ ಗೇಣು ಎಂಬಂತೆ ಸಂತೋಷದಿಂದ ಇದ್ದ ಗುರು ಮತ್ತು ಸುಕನ್ಯೆ ಬದುಕಲ್ಲಿ ಹಿರಿ ಮಗಳಾದ ಜಲಜಾಕ್ಷಿಯ ಸಾವು ಬರಸಿಡಿಲು ಬಡಿದಂತಾಗುತ್ತದೆ.

ಸಂಜೆ ಶಾಲೆಯಿಂದ ಬಂದು ಕೈಕಾಲು ತೊಳೆಯಲು ಬಾವಿಯಲ್ಲಿ ನೀರು ಸೇದಲು ಹೋದ ಜಲಜ ಬಾವಿಗೆ ಕಾಲುಜಾರಿ ಬಿದ್ದು ಸತ್ತು ಹೋಗುತ್ತಾಳೆ. ಈ ಘಟನೆಯಿಂದ ಸುಕನ್ಯೆ ಮತ್ತು ಗುರು ಇಬ್ಬರು ಮಂಕಾಗಿ ಬಿಡುತ್ತಾರೆ. ಇಂತಹ ಪರಿಸ್ಥಿತಿಯಲ್ಲೂ ಒಂದು ರಾತ್ರಿ ಗುರು ತನ್ನ ಹೆಂಡತಿಗೆ "ಸುಕ್ಕೂ ಮಗಳು ಸತ್ತ ದಿನ ನನಗೆ ರಜೆ ಇತ್ತು, ಮನೇಲಿ ಇರಬೇಕಾಗಿತ್ತು ಇರ್ಲಿಲ್ಲ, ಸರಿ, ಆದರೆ ಉಳಿದೆಲ್ಲಾ ದಿನ ಮಕ್ಕಳಿಬ್ಬರನ್ನೇ ಬಿಟ್ಟು ಕೆಲಸಕ್ಕೆ ಹೋಗುತ್ತಿರಲಿಲ್ವ? ಆವಾಗ್ಲೆ ಏನಾದ್ರೂ ಆಗಲೂ ಬಹುದಿತ್ತು, ಆಗ್ಲಿಲ್ಲ... ನಾ ಕುಡಿಯೋದು ನಿಜ, ಆದರೆ ಈಗಿನ ಕಾಲದಲ್ಲಿ ಕುಡಿಯದೇ ಇರುವವರು ಯಾರು? ಹೊರಗೆ ದುಡಿಯೋ ಗಂಡ್ಸು ಕುಡಿದ್ರೆ ಮಹಾ ಏನಾಯ್ತು?

ಈಗ ಎಂಥೆಂಥಾ ದೊಡ್ಡ ಜನರೇ ಕುಡಿತಾರೆ. ಸರ್ಕಾರದವರೇ ಪರವಾನಗಿ ಕೊಟ್ಟಿದ್ದಾರೆ ಅಂದಾಗ ಅದ್ರಿಂದ ಮಹಾ ನಾಚಿಕೆ ಏನು? ಏನೋ ನನ್ನ ಕೆಟ್ಟ ನಸೀಬಕ್ಕೆ ಸರಿಯಾಗಿ ಆಗಬಾರದ್ದು ಆಗಿಹೋಯ್ತು.... ದಯವಿಟ್ಟು ಅದನ್ನೆಲ್ಲಾ ಮರೀಲೇಬೇಕು ಸುಕ್ಕೂ... ನಿನ್ನಾಣೆ-ಮಕ್ಕಳ ಆಣೆ, ಇನ್ಮುಂದೆ ನಾನೂ ನನ್ನ ಚಟಗಳನ್ನು ಬಿಟ್ಟು ಬಿಡುತ್ತೇನೆ. ನಡೆದದ್ದನ್ನೆಲ್ಲಾ ಮರೆತುಬಿಡು... ಇಲ್ಲಿ ನಮಗೆ ನಾವೇ, ಮತ್ಯಾರೂ ಇಲ್ಲ''[12] ಎಂದು ಸತತವಾಗಿ ಅರ್ಧತಾಸು ತನ್ನ ಬಗ್ಗೆ ಮತ್ತು ತನ್ನ ಕುಡಿತದ ಚಟವನ್ನು ಸಮರ್ಥಿಸಿಕೊಂಡು ತನ್ನ ಅಲಕ್ಷ್ಯದಿಂದ ಆದ ಚೊಚ್ಚಲ ಮಗಳ ಸಾವಿಗೆ ಕ್ಷಮೆಯಾಚಿಸುತ್ತಾ ಗೋಗರೆದಾಗ ಅಸಹಾಯಕಳಾದ ಸುಕನ್ಯೆ ಗುರುನನ್ನು ಕ್ಷಮಿಸುತ್ತಾಳೆ ಇದರಿಂದ ಅವರ ನಡುವಿನ ಮನಸ್ತಾಪ ದೂರವಾಗುತ್ತದೆ.

ಒಂದು ವಾರ ಕೂಲಿ ಕೆಲಸಕ್ಕೆ ರಜೆ ಹಾಕಿ ಗುರು ಗದ್ದೆಯ ಕೆಲಸದಲ್ಲಿ ತೊಡಗಿಕೊಂಡನು. ಆದರೆ ಮತ್ತೆ ಕೂಲಿ ಕೆಲಸಕ್ಕೆ ಹೋಗಲು ಪ್ರಾರಂಭಿಸಿದ ನಂತರ ಮತ್ತೆ ಕಾಳ ಮತ್ತು ಕೆಂಚರ ಸಹವಾಸ ದೋಷದಿಂದ ಅವನು ಮತ್ತೆ ದುಶ್ಚಟಕ್ಕೆ ಬಲಿಯಾಗುತ್ತಾನೆ. ಇದರಿಂದಾಗಿ ಪ್ರತಿನಿತ್ಯ ಹೆಂಡತಿಯೊಡನೆ ಜಗಳವಾಡುತ್ತಿದ್ದ ಕಾರಣ ಮಕ್ಕಳಿಗೆ ಅಪ್ಪನನ್ನು ಕಂಡರೆ ಅಷ್ಟಕಷ್ಟೆ. ದಿನಕಳೆದಂತೆ ಗುರು ವಿಪರೀತವಾಗಿ ಕುಡಿತಕ್ಕೆ ಒಳಗಾದ ಕಾರಣ ಮನೆಯವರೆಲ್ಲ ಉಪವಾಸ ಇರಬೇಕಾಯಿತು. ಹಸಿವಿನಿಂದ ಕಂಗಾಲಾದ ಮಕ್ಕಳಿಗಾಗಿ ಸುಕನ್ಯೆ ಗುರುನನ್ನು ಪ್ರಶ್ನಿಸಿದರೆ ''ನಾ ಗಂಡ್ಸು, ನಾ ಬೇಕಾದ್ದು ಮಾಡ್ತೇನೆ, ನಾ ದುಡೀತೇನೆ-ನಾ ಖರ್ಚು ಮಾಡುತ್ತೇನೆ-ಸಾಲ ಮಾಡ್ತೇನೆ, ಅದನ್ನೆಲ್ಲಾ ಕೇಳ್ಲಿಕ್ಕೆ ನೀ ಯಾರೇ'' ಎಂದು ದನ ಬಡಿತ ಬಡಿಯುತ್ತಿದ್ದನು. ಇದರಿಂದ ಬೇಸತ್ತ ಗುರುನ ಹೆಂಡತಿಯು ಕೂಲಿ ಕೆಲಸಕ್ಕೆ ಹೋಗಲು ಶುರು ಮಾಡುತ್ತಾಳೆ. ಇದು ಗುರುವಿನಲ್ಲಿ ಸಿಟ್ಟು ತರಿಸಿದರು ''ದುಡೀಲಿ ತಗ ದರಿದ್ರ ಹೆಣ್ಣು, ಬಿಸಲು-ಬೆಂಕ್ಯಲ್ಲಿ ಬೇರೆಯವ್ರ ಕೈ ತಳಗೆ ದುಡಿಯೋ ಸುಖ ಅವ್ಳಿಗೂ ಗೊತ್ತಾಗ್ಲಿ'' ಎಂದು ಸುಮ್ಮನಾಗಿ ಬಿಟ್ಟ. ಈ ಸಂದರ್ಭದಲ್ಲಿ ಹೇಗೋ ವಯಸ್ಸಿಗೆ ಬಂದ ಎರಡನೆಯ ಮಗಳು ವಾರಿಜಾಳನ್ನು ದೂರದ ಮಹಾರಾಷ್ಟ್ರದ ಹುಡುಗನಿಗೆ ಕೊಟ್ಟು ಮದುವೆ ಮಾಡಿದರು. ಆದರೆ ಎರಡೇ ವರ್ಷದಲ್ಲಿ ಅವಳು ಗಂಡನ ಮನೆಯ ಮಾನಸಿಕ ಹಿಂಸೆಯನ್ನು ಸಹಿಸಲಾರದೆ ಕೆರೆಗೆ ಹಾರಿ ಪ್ರಾಣ ಕಳೆದುಕೊಂಡಳು. ಈ ಸುದ್ದಿ ಗುರು ಮತ್ತು ಸುಕನ್ಯೆಯನ್ನು ಮತ್ತಷ್ಟು ಆಘಾತಕ್ಕೆ ದೂಡಿತು. ಇನ್ನೊಂದೆಡೆ ಮನೆಯಲ್ಲಿ ಅಪ್ಪ-ಅಮ್ಮರ ಜಗಳ, ಅಕ್ಕಂದಿರ ಅನಿರೀಕ್ಷಿತ ಸಾವುಗಳಿಂದ ಆಘಾತಕ್ಕೊಳಗಾದ ವನಜ ಹುಚ್ಚಾಸ್ಪತ್ರೆ ಸೇರುತ್ತಾಳೆ. ಅಪ್ಪನ ಕುಡುಕುತನ, ಅಮ್ಮನ ಸಿಡುಕುತನ, ಅವರಿಬ್ಬರ ಜಗಳ ಕಂಡು ನೀವೂ ಬ್ಯಾಡ, ನಿಮ್ಮ ಆಸ್ತಿನೂ ಬ್ಯಾಡ ಅಂತ ಮಗ ಶ್ರೀಗಣೇಶ ದೇಶಾಂತರ ಹೊರಟು ಹೋಗುತ್ತಾನೆ. ಇವುಗಳಿಂದ ಜರ್ಜರಿತಳಾದ ಸುಕನ್ಯೆ ಇದ್ದಕ್ಕಿಂದ್ದಂತೆ ಎಲ್ಲರಿಗೂ ಕಗ್ಗಂಟಾದ ಪ್ರಶ್ನೆಯಾಗಿ ಕಣ್ಮರೆಯಾಗುತ್ತಾಳೆ.

ಸುಕನ್ಯೆ ಸತ್ತಳೋ, ಬದುಕಿದ್ದಾಳೋ, ಎಲ್ಲಿಗೆ ಹೋದಳು? ಏನಾದಳು? ಎಂಬುದು ಕಾದಂಬರಿಯ ಆಚೆಗೂ ಓದುಗರಿಗೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ಮಕ್ಕಳಿಗಿಂತಲೂ ಹೆಚ್ಚಾಗಿ ಹೆಂಡತಿಯನ್ನು ಕಳೆದುಕೊಂಡ ನೋವು ಗುರುವಿನ ಮನಸಿನ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿ ಜೋರಾಗಿಯೇ ಅಳುವುದರ ಮೂಲಕ ತನ್ನ ದುಃಖವನ್ನು ಹೊರಹಾಕುತ್ತಾನೆ.

ಸಮಾಜದಲ್ಲಿ ಸುಂದರವಾಗಿ ಬದುಕು ಕಟ್ಟಿಕೊಳ್ಳಲು ಗುರು ಬಯಸಿದರೂ ಆತನ ಕುಡಿತ ಮತ್ತು ಜೂಜಿನ ದುಶ್ಚಟಗಳು ಅವನ ಕುಟುಂಬವನ್ನೇ ಸರ್ವನಾಶ ಮಾಡುತ್ತದೆ ಎಂಬುದನ್ನು ಮತ್ತು ದುಶ್ಚಟಗಳಿಂದ ಆಗುವ ಅನಾಹುತಗಳು ಮತ್ತು ದುಷ್ಪರಿಣಾಮಗಳನ್ನು ಗುರು ಪಾತ್ರದ ಮೂಲಕ ಎಳೆಎಳೆಯಾಗಿ ಚಿತ್ರಿಸಿ ಭಾಗೀರಥಿ ಹೆಗಡೆ ಅವರು ಸಮಾಜಕ್ಕೆ ಒಂದು ಉತ್ತಮ ಸಂದೇಶ ನೀಡುವ ಪ್ರಯತ್ನವನ್ನು ಮಾಡಿರುವುದನ್ನು ಗಮನಿಸಬಹುದು. ಅಲ್ಲದೇ ಅವಿಭಕ್ತ ಕುಟುಂಬ ಮತ್ತು ವಿಭಕ್ತ ಕುಟುಂಬಗಳ ನಡುವಿನ ವ್ಯತ್ಯಾಸವನ್ನು ಗುರು ಮತ್ತು ಸುಕನ್ಯೆ ಕುಟುಂಬದ ಮೂಲಕ ಈ ಕಾದಂಬರಿಯಲ್ಲಿ ಅರ್ಥಪೂರ್ಣವಾಗಿ ವಿವೇಚಿಸಲಾಗಿದೆ. ಅರ್ಥ ಕಳೆದುಕೊಳ್ಳುತ್ತಿರುವ ಮಾನವ ಸಂಬಂಧಗಳನ್ನು ಉಳಿಸಿ ಮಾಯವಾಗುತ್ತಿರುವ ಜೀವನ ಪ್ರೀತಿಯನ್ನು ಅವರಲ್ಲಿ ಬೆಳೆಸಬೇಕು ಎಂಬ ಸಂದೇಶವನ್ನು ಕಾದಂಬರಿಯಲ್ಲಿ ಬರುವ ಪಾತ್ರಗಳ ಮೂಲಕ ಸಮಾಜಕ್ಕೆ ನೀಡಲಾಗಿದೆ. ಕೂಲಿ ಕೆಲಸಕ್ಕೆ ಹೋಗಿ ತನ್ನ ಕುಟುಂಬವನ್ನೆ ಕಳೆದುಕೊಂಡ ಗುರು "ತನ್ನ ಎಲ್ಲಾ ವರ್ತನೆಗೂ ಸಮರ್ಥನೆಯಾಗಿ ತನ್ನಪ್ಪಜ್ಜರಿಂದ ಬಂದ ದೊಡ್ಡ ಪರಂಪರೆಯೇ ಇದೆ. ಗಂಡಸಾದವನು ಏನು ಮಾಡಿದರೂ ತಪ್ಪಲ್ಲ, ಅದನ್ನು ಕೇಳುವವರೂ ಜಗತ್ತಿನಲ್ಲಿ ಯಾರೂ ಇಲ್ಲ. ಹೆಂಡತಿಯನ್ನು ಇಷ್ಟು ಆಳದಿದ್ದರೆ ಮದುವೆ ಮಾಡಿಕೊಂಡು ಬಂದಿದ್ದು ಯಾತಕ್ಕಾಗಿ?"[13] ಎಂದು ನಂಬಿಕೊಂಡು ಬಿಟ್ಟಿದ್ದ. ಈ ಪೂರ್ವಾಗ್ರಹಪೀಡಿತ ನಂಬಿಕೆಯೇ ಅವನ ಸುಂದರ ಬದುಕಿಗೆ ಮುಳುವಾಯಿತು. ತನ್ನ ದರ್ಪ, ಅಹಂಕಾರದಿಂದಲೇ ತನ್ನ ಇಡೀ ಕುಟುಂಬದ ಜವಾಬ್ದಾರಿ ನಿರ್ವಹಿಸಿದ ಪರಂಭಾವನೂ ನಂತರ ಬದಲಾಗುತ್ತಾನೆ. ಭಾಗೀರಥಿ ಹೆಗಡೆ ಅವರು ಈ ಕಾದಂಬರಿಯಲ್ಲಿ ತಂದಿರುವ ಪುರುಷ ಪಾತ್ರಗಳು ಪುರುಷ ಪ್ರಧಾನ ವ್ಯವಸ್ಥೆ ಮತ್ತು ಸ್ತ್ರೀಪರ ತಟಸ್ಥ ಮನಸ್ಥಿತಿಯ ಪ್ರತೀಕದಂತೆ ಬಿಂಬಿತವಾಗಿದ್ದು ಸ್ತ್ರೀಪಾತ್ರಗಳು ಅದನ್ನು ಪ್ರತಿಭಟಿಸದೇ ಒಪ್ಪಿ ನಡೆಯುವ ಪಾತ್ರಗಳಾಗಿ ಚಿತ್ರಿಸಿರುವುದು ವಿಷಾದ.

**ಕೊನೆ ಟಿಪ್ಪಣಿಗಳು:**

1. ಭಾಗೀರಥಿ ಹೆಗಡೆ. (2008). ಹೊಳೆಯ ಹಾದಿ. ಆನಂದಕಂದ ಗ್ರಂಥಮಾಲೆ. ಮಲ್ಲಾಡಿಹಳ್ಳಿ. ಪು.ಸಂ. 8
2. ಅದೇ. ಪು.ಸಂ. 87
3. ಅದೇ. ಪು.ಸಂ. 72
4. ಅದೇ. ಪು.ಸಂ. 23
5. ಅದೇ. ಪು.ಸಂ. 24
6. ಅದೇ. ಪು.ಸಂ. 71
7. ನಾಯಕ್ ಜಿ. ಎಚ್. (1988). ನಿಜದನಿ. ಅಭಿನವ ಪ್ರಕಾಶನ. ಬೆಂಗಳೂರು. ಪು.ಸಂ. 206
8. ಭಾಗೀರಥಿ ಹೆಗಡೆ. (2008). ಹೊಳೆಯ ಹಾದಿ. ಆನಂದಕಂದ ಗ್ರಂಥಮಾಲೆ. ಮಲ್ಲಾಡಿಹಳ್ಳಿ. ಪು.ಸಂ. 77
9. ಅದೇ. ಪು.ಸಂ. 95
10. ಅದೇ. ಪು.ಸಂ. 96
11. ಅದೇ. ಪು.ಸಂ. 97
12. ಅದೇ. ಪು.ಸಂ. 113
13. ಅದೇ. ಪು.ಸಂ. 131

## ಆಕರ ಗ್ರಂಥ:

1. ಭಾಗೀರಥಿ ಹೆಗಡೆ. (2008). ಹೊಳೆಯ ಹಾದಿ. ಆನಂದಕಂದ ಗ್ರಂಥಮಾಲೆ. ಮಲ್ಲಾಡಿಹಳ್ಳಿ.

## ಪರಾಮರ್ಶನ ಗ್ರಂಥಗಳು:

1. ಮುಗಳಿ ರಂ. ಶ್ರೀ. (2014). ಕನ್ನಡ ಸಾಹಿತ್ಯ ಚರಿತ್ರೆ. ಗೀತಾಬುಕ್ ಹೌಸ್. ಮೈಸೂರು.
2. ಶಾಮರಾಯ ತ. ಸು. (2012). ಕನ್ನಡ ಸಾಹಿತ್ಯ ಚರಿತ್ರೆ. ಕನ್ನಡ ಸಾಹಿತ್ಯ ಪರಿಷತ್ತು. ಚಾಮರಾಜಪೇಟೆ.
3. ಶ್ರೀಮತಿ ಎಚ್. ಎಸ್. (2019). ಸ್ತ್ರೀವಾದ ಚಿಂತನೆ ಮತ್ತು ಹೋರಾಟ. ಅಭಿರುಚಿ ಪ್ರಕಾಶನ. ಮೈಸೂರು.
4. ನಾಗಭೂಷಣ ಸ್ವಾಮಿ ಓ. ಎಲ್. (2015). ವಿಮರ್ಶೆಯ ಪರಿಭಾಷೆ. ಅಭಿನವ ಪ್ರಕಾಸನ. ಬೆಂಗಳೂರು.
5. ನಾಯಕ್ ಜಿ. ಎಚ್. (1988). ನಿಜದನಿ. ಅಭಿನವ ಪ್ರಕಾಶನ. ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.